**<u>ದಿನಾಂಕಃ 28.01.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ-ಶ್ರೀ ಆರ್ ಎಲ್ ವಾದಿ ಪರ ವಕೀಲರಿಂದಃ</u>**

ನಾನು ಪಿ ಯು ಸಿ ವರೆಗೆ ಓದಿದ್ದೇನೆ. ನಾನು ಜನಿವಾರ ಮತ್ತು ಚನ್ನರಾಯಪಟ್ಟಣ ದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಜನ್ಮ ದಿನಾಂಕ 01.04.1972. ನೀವು ಹುಟ್ಟುವ 8-9 ವರ್ಷದ ಹಿಂದೆ 1 ನೇ ಪ್ರತಿವಾದಿ ಕೆಂಪಮ್ಮನಿಗೆ ದಾವಾ ಸ್ವತ್ತು ಮಂಜೂರಾಗಿದೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ನೀವು ಹುಟ್ಟುವ ಮೊದಲು ಏನು ನಡೆದಿದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 1 ನೇ ಪ್ರತಿವಾದಿಗೆ ನೀವು ಹುಟ್ಟುವ ಮೊದಲೇ ದಾವಾ ಸ್ವತ್ತು ಮಂಜೂರಾಗಿದ್ದು ನಿಮ್ಮ ತಂದೆ 3 ನೇ ಪ್ರತಿವಾದಿ ಮಾತು ಕೇಳಿಕೊಂಡು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಿಮ್ಮ, ನಿಮ್ಮ ತಂದೆ, ಮತ್ತು ನಿಮ್ಮ ಕುಟುಂಬದವರ ಮೇಲೆಲ್ಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ದೂರು ದಾಖಲಿಸಿದವರು ವಾದಿಯ ಗಂಡ ಕೃಷ್ಣಶೆಟ್ಟಿ ಎಂದರೆ ಸರಿ. ಈ ದಾವಾ ಸ್ವತ್ತಿನ ವಿಚಾರವಾಗಿಯೇ ಆ ದೂರು ದಾಖಲಾಗಿತ್ತು ಎಂದರೆ ಸರಿಯಲ್ಲ.

ದಾವಾ ಸ್ವತ್ತು ನಿಮ್ಮ ತಂದೆಯ ಪಿತ್ರಾರ್ಜಿತ ಅಥವಾ ಮಂಜೂರಾದ ಸ್ವತ್ತು ಅಲ್ಲಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಸ್ವತ್ತು ನಿಮ್ಮ ತಂದೆ ಕ್ರಯಕ್ಕೆ ಪಡೆದ ಸ್ವತ್ತು ಅಲ್ಲಾ ಎಂದರೆ ಸರಿ. ದಾವಾ ಸ್ವತ್ತು ಸರ್ವೆ ನಂಬರ್ಃ 60 ಕ್ಕೆ ಸಂಬಂಧಪಟ್ಟದ್ದು ಆಗಿದೆ. ಸರ್ವೆ ನಂಬರ್ಃ 60 ರಲ್ಲಿ ಒಟ್ಟು 137 ಎಕರೆ 10 ಗುಂಟೆ ಜಮೀನು ಇದೆ. ದಾವಾ ಸ್ವತ್ತಿನ ಪೋಡಿ ಆಗಿದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅದು ಪೋಡಿಯಾಗಿ ಹೊಸ ಸರ್ವೆ ನಂಬರ್ಃ 106 ಎಂದು ಆಗಿದೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ಕನ್ನಡ ಓದಲು ಬರುತ್ತದೆ. ಇಂಗ್ಲೀಷ್ ಹೆಚ್ಚು ಓದಲು ಬರುವುದಿಲ್ಲ. ನಿಡಿ-13 ಸರ್ವೆ ನಂಬರ್ಃ 60 ರಲ್ಲಿ ತಹಶೀಲ್ದಾರ್ ಆದೇಶದಂತೆ ಎಲ್ ಎನ್ ಡಿ /161/61 ದಿಃ 27.07.1963 ರಂತೆ 15 ಜನಕ್ಕೆ ಜಮೀನು ಮಂಜೂರಾದ ದಾಖಲೆ ಆಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ನಿಮ್ಮ ತಂದೆ ಹೆಸರು ಏನಾದರೂ ಮಂಜೂರಿದಾರರ ಪಟ್ಟಿಯಲ್ಲಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಕ್ರಮ ಸಂಖ್ಯೆ13 ರಲ್ಲಿ ಕೆಂಪಮ್ಮನ ಹೆಸರು ಇದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾಖಲೆಯಂತೆ 1 ನೇ ಪ್ರತಿವಾದಿ ಕೆಂಪಮ್ಮನಿಗೆ ಸರ್ವೆ ನಂಬರ್ಃ 60 ರಲ್ಲಿ ಬ್ಲಾಕ್ ನಂಬರ್ 11 ರಲ್ಲಿ 4 ಎಕರೆ ಜಮೀನು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಮಂಜೂರಾತಿಗೆ ಸಂಬಂಧಪಟ್ಟ ದಾಖಲೆಯೇ ನಿಡಿ-10 ರ ಗ್ರಾಂಟ್ ಸರ್ಟಿಫಿಕೇಟ್ ಆಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ನಿಮ್ಮ ತಂದೆ ವಾದಿ ಮತ್ತು 1 ಮತ್ತು 2 ನೇ ಪ್ರತಿವಾದಿ ವಿರುದ್ಧ ಒ ಎಸ್ 126/1990 ಈ ದಾವೆಯನ್ನ ಹೂಡಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ದಾವೆಯಲ್ಲಿ ಏನು ಪರಿಹಾರ ಕೇಳಲಾಗಿತ್ತು ಎಂದರೆ ಸಾಕ್ಷಿ ದಾವಾ ಸ್ವತ್ತಿನ ಹಕ್ಕು ಘೋಷಣೆಗಾಗಿ ಹೂಡಿದ್ದರು ಎನ್ನುತ್ತಾರೆ. ಆ ದಾವೆಯಲ್ಲಿ ಎಷ್ಟು ಐಟಂ ಸ್ವತ್ತುಗಳ ಸಂಬಂಧ ಪರಿಹಾರ ಕೇಳಲಾಗಿತ್ತು ಎಂದರೆ ಸಾಕ್ಷಿ ಎರಡು ಐಟಂಗಳು ಎನ್ನುತ್ತಾರೆ. ಆ ಎರಡು ಸ್ವತ್ತುಗಳ ಚೆಕ್ಕು ಬಂದಿ ಹೇಳಿ ಎಂದರೆ ಸಾಕ್ಷಿ ಸರ್ವೆ ನಂಬರ್ಃ 60 ರ 5 ಎಕರೆ ಪೂರ್ತಿ ಜಮೀನಿಗೆ ಚೆಕ್ಕು ಬಂದಿ ಪೂರ್ವಕ್ಕೆ ಸಿದ್ದಪ್ಪ ರವರ ಜಮೀನು, ಪಶ್ಚಿಮಕ್ಕೆ ವಾಬೇಗೌಡರ ಜಮೀನು, ಉತ್ತರಕ್ಕೆ ದೇವರಾಜೇಗೌಡರ ಜಮೀನು, ದಕ್ಷಿಣಕ್ಕೆ ಶ್ರವಣೇರಿ ಗಡಿ ವೈರಮುಡಿಗೌಡನ ಜಮೀನು. ಮೇಲೆ ಹೇಳಿದ ದಾವೆಯನ್ನ ಈಗ ಹೇಳಿದ ಒಂದೇ ಸ್ವತ್ತಿನ

ಸಂಬಂಧ ಹೂಡಲಾಗಿತ್ತು.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ ನಿಡಲಾಯಿತು.**

ಮರುವಿಚಾರಣೆಃ ಇಲ್ಲ

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ, ಚನ್ನರಾಯಪಟ್ಟಣ